ತೀವ್ರ ಪರಿವೀಕ್ಷಣೆ ಕ್ರಮಗಳನ್ನು ಕೈಗೊಂಡು ಸದ್ಯಕ್ಕೆ ಜಾಗೃತಿ ಉಂಟು ಮಾಡಲು ಪ್ರಯತ್ನಿಸಲಾಗುತ್ತಿದೆ.

ಇ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬಾಲ ಕಾರ್ಮಿಕರಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸ್ವಯಂ ಸೇವಾ ಸಂಸ್ಥೆಗಳಿಗೆ ಅನುದಾನ ನೀಡಲಾಗುತ್ತಿದೆ.

1) ವಸತಿ
2) ಅನೌಪಚಾರಿಕ ಶಿಕ್ಷಣ
3) ಆರೋಗ್ಯ ಸೇವೆಗಳು
4) ಪೌಷ್ಟಿಕ ಆಹಾರ ಮತ್ತು ಮನರಂಜನೆ
5) ವೃತ್ತಿ ತರಬೇತಿಗಳನ್ನು ನೀಡುವುದು.

ಈ) ಸದ್ಯಕ್ಕೆ ಜನಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಇದು ಸರಿಯಾದ ಫಲ ಕೊಡದೇ ಹೋದರೆ ಮೊಕದ್ದಮೆ ಹೂಡುವ ತೀವ್ರ ಕ್ರಮವನ್ನು ಕೈಗೊಳ್ಳಲಾಗುವುದು.

ರೆವಿನ್ಯೂ ಭೂಮಿಗಳ ಮಾರಾಟ

1020 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರ ಜಿಲ್ಲೆಗೆ ಸೇರಿದ ಆನೇಕಲ್ ಬೆಂಗಳೂರು ಉತ್ತರ ಮತ್ತು ಬೆಂಗಳೂರು ದಕ್ಷಿಣ ತಾಲ್ಲೂಕುಗಳಲ್ಲಿ ಕಳೆದ ವರ್ಷದಿಂದ ಮಾರಾಟವಾದ ರೆವಿನ್ಯೂ ಜಮೀನುಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

ಆ) ಹರಿಜನ ಗಿರಿಜನರಿಗೆ ದರಖಾಸ್ತು ಮೂಲಕ ಕೊಟ್ಟ ಜಮೀನುಗಳು 16 ವರ್ಷಗಳ ಮೊದಲೇ ಮಾರಾಟವಾಗಿರುವ ಪ್ರಸಂಗಗಳಿಷ್ಟು ? ಅಂತಹ ಪ್ರಕರಣಗಳಿದ್ದಲ್ಲಿ ಅವುಗಳು ಅನೂರ್ಜಿತವೆಂದು ಘೋಷಿಸಲು ಸರ್ಕಾರ ಕಾರ್ಯಕ್ರಮಗಳನ್ನು ಹಾಕಿ ಕೊಂಡು ಮುಂದಾದರು ಇವುಗಳನ್ನು ತಪ್ಪಿಸಲು ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುವುದೆ ?

ಇ) ಭೂ ಸುಧಾರಣಾ ಕಾಯ್ದೆಗೆ ವಿರುದ್ಧವಾಗಿ ಜಮೀನುಗಳು ಕೊಳ್ಳುವವರ ಹಾಗೂ ಕೊಂಡಿರುವವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಸರ್ಕಾರದ ಅಧಿಕಾರಿಗಳು, ಸಬ್‌ರಿಜಿಸ್ಟ್ರಾರ್‌ಗಳು ಗ್ರಾಮಲೆಕ್ಕಾಧಿಕಾರಿಗಳು ಇಂತಹ ಅಕ್ರಮ ವಹಿವಾಟುಗಳಿಗೆ ಬೆಂಬಲ ಕೊಡುತ್ತಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

(ಎಕರೆಗಳಲ್ಲಿ)

ಅ)	ತಾಲ್ಲೂಕು	ಪ್ರಕರಣಗಳು	ವಿಸ್ತೀರ್ಣ
	ಆನೇಲ್	2970	3861-00
	ಬೆಂಗಳೂರು ಉತ್ತರ	2813	4261-08
	ಬೆಂಗಳೂರು ದಕ್ಷಿಣ	3671	4261-08
	ಒಟ್ಟು	**9454**	**12,284-25**

ಅ) 642 ಪ್ರಕರಣಗಳು.

ಜಮೀನು ಮಂಜೂರಾದ 5 ವರ್ಷದ ನಂತರ ಮತ್ತು 15 ವರ್ಷಗಳ ಒಳಗೆ ಜಮೀನಿನ ಬೆಲೆಯ ಶೇ : 50ರಷ್ಟು ಸರ್ಕಾರಕ್ಕೆ ಪಾವತಿ ಮಾಡಿ, ಸರ್ಕಾರದ ಅನುಮತಿ ಪಡೆದು ಮಾರಾಟ ಮಾಡಲು ಅವಕಾಶವಿರುತ್ತದೆ.

ಇ) ಹೌದು.

ಈ) ಷಾಮೀಲಾಗಿರುವುದಾಗಿ ಕಂಡು ಬಂದ ಅಧಿಕಾರಿಗಳು ಮತ್ತು ನೌಕರರುಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಚಿಕ್ಕಮಗಳೂರು ಜಿಲ್ಲೆಗೆ ಅತಿವೃಷ್ಟಿ ಕಾಮಗಾರಿಗಾಗಿ ಬಿಡುಗಡೆ ಮಾಡಿದ ಹಣ.

393 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1994-95ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಗೆ ಅತಿವೃಷ್ಟಿ ಕಾಮಗಾರಿಗಾಗಿ ಸರ್ಕಾರದಿಂದ ರೂ. 180.00 ಲಕ್ಷ ಬಿಡುಗಡೆಯಾಗಿದೆಯೇ?

ಆ) ಈ ಹಣವು ಬಿಡುಗಡೆಯಾಗಿದ್ದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಖರ್ಚು ಮಾಡಲಾಗಿದೆ?

ಇ) ಈ ಹಣದಲ್ಲಿ ರೈತರಿಗೆ ಪರಿಹಾರ ನೀಡಿದ್ದು ಹಾಗೂ ಅತಿವೃಷ್ಟಿಯಿಂದ ಮನೆಗಳು ಬಿದ್ದು ಹಾನಿ ಎಷ್ಟು ಮತ್ತು ಖರ್ಚಾಗಿರುವ ಹಣವೆಷ್ಟು?ವಿವರ ನೀಡುವುದು?

ಈ) ಅತಿವೃಷ್ಟಿಯಿಂದ ಹಾನಿಯಾದಂತಹ ಕೆರೆ ಕಟ್ಟೆ ರಸ್ತೆ ಮತ್ತು ಸೇತುವೆಗಳೆಷ್ಟು? ಮತ್ತು ಇದರ ದುರಸ್ತಿಗಾಗಿ ಖರ್ಚು ಮಾಡಲಾಗಿರುವ ಹಣವೆಷ್ಟು?

ಉ) ಅತಿವೃಷ್ಟಿ ಪರಿಹಾರ ಕಾಮಗಾರಿಗಳನ್ನು ಯಾವ ಯಾವ ತಾರೀಖುಗಳಲ್ಲಿ ಜಿಲ್ಲಾಧಿಕಾರಿಗಳು 1994-95ನೇ ಸಾಲಿನಲ್ಲಿ ಕೈಗೆತ್ತಿಕೊಂಡಿರುವರು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :